ಓ.ಎಸ್. ನಂಃ 190/2023
ಡಿ.ಡಬ್ಲ್ಯೂ-3 (ರಾಮಪ್ಪ)

ದಿನಾಂಕ: 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಮ್.ಡಿ.ಪಿ. ವಾದಿ ಪರ ವಕೀಲರಿಂದಃ</u>**

1ನೇ ವಾದಿ ನನ್ನ ಅಕ್ಕ, 2ನೇ ವಾದಿ ನನ್ನ ತಂಗಿ. ವಾದಿಯರು ಪಾಲು ಕೋರಿ ಈ ದಾವೆ ಮಾಡಿದ್ದಾರೆ. ನಮ್ಮ ತಂದೆ ಸಿದ್ದಪ್ಪ ಇವರಿಗೆ 3 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ದಾವಾ ಆಸ್ತಿಗಳೆಲ್ಲವೂ ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಇದೇ ದಾವಾ ಅಸ್ತಿಗಳ ಕುರಿತು ಪ್ರವಾತಿದಿ 16 ಮತ್ತು 17 ರವರು ಓ.ಎಸ್.ನಂ.197/2023 ರಲ್ಲಿ ಪಾಲು ಕೋರಿ ದಾವೆ ಮಾಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 6ನೇ ಪ್ರತಿವಾದಿ ಇದ್ದೇನೆ ಎಂದರೆ ಸರಿ. ಸದರಿ ದಾವೆ ವಜಾ ಆಗಿದೆ ಎಂದರೆ ಸರಿ.

2. ಪ್ರತಿವಾದಿ 15 ರವರಿಗೆ ನಾನು ಮಾಡಿಕೊಟ್ಟ ಖರೀದಿ ಕರಾರು ಪತ್ರ ವಾದಿಯರಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸದರಿ ಖರೀದಿ ಕರಾರು ಪತ್ರ ವಾದಿಯರಿಗೆ ಬಂಧನಕಾರಿ ಅಲ್ಲ ಎಂದರೆ ಸರಿ.

**<u>ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. 15ನೇ ಪ್ರತಿವಾದಿ ಪರ ವಕೀಲರಿಂದಃ</u>**

ಪಾಟೀಸವಾಲಿಗೆ ಸಮಯ ಕೋರುತ್ತಾರೆ, ಸಮಯ ಕೊಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ